## ಜನರಿಗೆ ವಿದೇಶೀ ವಿನಿಮಯಕ್ಕೆ ಅವಕಾಶವನ್ನು ಸರಳಗೊಳಿಸುವುದು
## ಹೆಚ್ಚು ಸಂಸ್ಥೆಗಳು ವ್ಯಾಪಾರೇತರ ಚಾಲ್ತಿ ಖಾತೆ ವ್ಯವಹಾರಗಳನ್ನು ನಿರ್ವಹಿಸುವುದು

**ಮೇ 6, 2006**

ಜನರು ವಿದೇಶೀ ವಿನಿಮಯಕ್ಕೆ ಸುಲಭವಾಗಿ ಅವಕಾಶ ಪಡೆಯಲು ಸಾಧ್ಯವಾಗುವಂತೆ ಇಂದು ಭಾರತೀಯ ರಿಜರ್ವ್ ಬ್ಯಾಂಕ್ ಕ್ರಮಗಳನ್ನು ಸೂಚಿಸಿ ಸುತ್ತೋಲೆ ಹೊರಡಿಸಿದೆ. ಈ ಸುತ್ತೋಲೆಯ ಪ್ರಕಾರ ಆಯ್ದ ಪೂರ್ಣ ಪ್ರಮಾಣದ ಹಣಪರಿವರ್ತಕರು, ಪೌರ ಸಹಕಾರ ಬ್ಯಾಂಕುಗಳು ಹಾಗೂ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳಿಗೆ ವಿವಿಧ ವ್ಯಾಪಾರೇತರ ಚಾಲ್ತಿ ಖಾತೆ ವ್ಯವಹಾರಗಳಿಗಾಗಿ ವಿದೇಶಿ ವಿನಿಮಯದ ಬಿಡುಗಡೆ/ರವಾನೆಗೆ ಸಂಬಂಧಪಟ್ಟ ವಿಸ್ತೃತ ವ್ಯವಹಾರಗಳನ್ನು ಕೈಗೊಳ್ಳಲು ಅನುಮತಿ ನೀಡಲಾಗಿದೆ.

ವಿದೇಶೀ ವಿನಿಮಯಕ್ಕೆ ಸಂಬಂಧಪಟ್ಟ ವ್ಯವಹಾರಗಳಲ್ಲಿ ಪ್ರಗತಿಪರ ಉದಾರೀಕರಣವನ್ನು ಜಾರಿಗೊಳಿಸಿರುವುದರಿಂದಾಗಿ ಈಗ ಸಾಮಾನ್ಯರು ಭಾರತೀಯ ರಿಸರ್ವ್ ಬ್ಯಾಂಕನ್ನು ಸಂಪರ್ಕಿಸದೆ ವಿವಿಧ ಬಗೆಯ ವ್ಯಾಪಾರೇತರ ಚಾಲ್ತಿ ಖಾತೆಗಳನ್ನು ಹೊಂದಿರಬಹುದಾಗಿದೆ. ಉದಾಹರಣೆಗೆ ಜನರು ಪ್ರವಾಸ, ವೈದ್ಯಕೀಯ ಚಿಕಿತ್ಸೆ, ಶಿಕ್ಷಣಕ್ಕಾಗಿ ವಿದೇಶ ಪ್ರವಾಸ, ಹಾಗೂ ವ್ಯಾಪಾರ ವ್ಯವಹಾರಗಳಲ್ಲದ ವಿಭಿನ್ನ ಬಗೆಯ ಚಾಲ್ತಿ ಖಾತೆ ವ್ಯವಹಾರಗಳಿಗೆ ವಿದೇಶೀ ವಿನಿಮಯವನ್ನು ಬಳಸಿಕೊಳ್ಳಬಹುದಾಗಿದೆ. ಪ್ರಸ್ತುತ, ಈ ಉದ್ದೇಶಗಳಿಗಾಗಿ ಅಧಿಕೃತ ವ್ಯಾಪಾರಿಗಳ ಮೂಲಕ ಮಾತ್ರವೇ ವಿದೇಶೀ ವಿನಿಮಯಕ್ಕೆ ಅವಕಾಶ ಪಡೆಯಬಹುದಾಗಿದೆ. ರಿಸರ್ವ್ ಬ್ಯಾಂಕು ಪೂರ್ಣ ಪ್ರಮಾಣದ ಹಣ ಪರಿವರ್ತಕರಿಗೆ, ಆಯ್ದ ಪೌರ ಸಹಕಾರಿ ಬ್ಯಾಂಕುಗಳಿಗೆ ಹಾಗೂ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳಿಗೆ ಈ ಉದ್ದೇಶಕ್ಕಾಗಿ ವಿದೇಶೀ ವಿನಿಮಯವನ್ನು ಬಟವಾಡೆ ಮಾಡಲು ಅನುಮತಿ ನೀಡಿರುವುದರಿಂದ ಜನರು ಇಂಥ ಉದ್ದೇಶಗಳಿಗಾಗಿ ವಿಸ್ತೃತ ಪ್ರಮಾಣದ ಸಂಸ್ಥೆಗಳಿಂದ ವಿದೇಶೀ ವಿನಿಮಯಕ್ಕೆ ಅವಕಾಶ ಪಡೆಯಲು ಸಾಧ್ಯವಾಗುತ್ತದೆ.

ಪ್ರವರ್ಗ–IIರ ಅಧಿಕೃತ ವ್ಯಾಪಾರಿಗಳು ಎನ್ನಲಾದ ಈ ಸಂಸ್ಥೆಗಳು ಖಾಸಗಿ ಭೇಟಿಗಳು, ವ್ಯವಹಾರ ಪ್ರವಾಸ, ಜಾಗತಿಕ ಸಮ್ಮೇಳನಗಳು ಹಾಗೂ ತಜ್ಞ ತರಬೇತಿಯಲ್ಲಿ ಭಾಗವಹಿಸುವುದಕ್ಕಾಗಿ ಶುಲ್ಕ, ಅಂತರರಾಷ್ಟ್ರೀಯ ಮೇಳಗಳು/ ಸ್ಪರ್ಧೆಗಳಲ್ಲಿ (ತರಬೇತಿ, ಪ್ರಾಯೋಜಕತೆ ಹಾಗೂ ಬಹುಮಾನದ ಹಣ), ಭಾಗವಹಿಸುವುದಕ್ಕಾಗಿ ಮಾಡುವ ಜಮೆ, ಚಿತ್ರೀಕರಣ, ವಿದೇಶದಲ್ಲಿ ವೈದ್ಯಕೀಯ ಚಿಕಿತ್ಸೆ, ವಿದೇಶದಲ್ಲಿ ಶಿಕ್ಷಣ, ವಿದೇಶೀಯ ವಿಶ್ವವಿದ್ಯಾಲಯಗಳೊಡನೆ ಶಿಕ್ಷಣಕ್ಕಾಗಿ ಒಪ್ಪಂದ ಮಾಡಿಕೊಳ್ಳಲು ಮಾಡುವ ಹಣರವಾನೆ ಭಾರತದಲ್ಲಿ ಹಾಗೂ ವಿದೇಶದಲ್ಲಿ ನಡೆಯುವ ಜಿಆರ್ಇ ಹಾಗೂ ಟೋಫೆಲ್ ಮುಂತಾದ ಪರೀಕ್ಷೆಗಳಿಗಾಗಿ ಹೆಚ್ಚುವರಿ ಸ್ಕೋರ್ ಹಾಳೆಗಳು, ಉದ್ಯೋಗ, ಪ್ರಕ್ರಿಯೆ ಹಾಗೂ ನಿರ್ಧರಣಾ ಶುಲ್ಕಗಳು, ವಲಸೆ ಹಾಗೂ ವಲಸೆ ಸಮಾಲೋಚನಾ ಶುಲ್ಕಗಳು, ವಲಸೆ ಹೋಗಲು ಬಯಸುವವರಿಗಾಗಿ ಪರಿಣತಿ, ಯೋಗ್ಯತಾ ಪತ್ರ ನಿರ್ಧರಣಾ ಶುಲ್ಕಗಳು, ವೀಸಾ ಶುಲ್ಕ, ನೋಂದಣಿ/ವಂತಿಗೆ/ಸದಸ್ಯ ಶುಲ್ಕಗಳನ್ನು ಅಂತಾರಾಷ್ಟ್ರೀಯ ಸಂಸ್ಥೆಗಳಿಗೆ ಸಂದಾಯ ಮಾಡುವುದಕ್ಕಾಗಿ ವಿದೇಶಿ ವಿನಿಮಯವನ್ನು ಬಟವಾಡೆ ಮಾಡಲು ಸಾಧ್ಯವಾಗುತ್ತದೆ.

ವಿದೇಶಿ ವಿನಿಮಯ ವ್ಯವಹಾರಗಳನ್ನು ಕೈಗೊಳ್ಳಲು ಲೈಸೆನ್ಸ್ ಪಡೆದ ಅಧಿಕೃತ ವ್ಯಕ್ತಿಗಳ ಮಧ್ಯದ ಹಂತವನ್ನು ವಿಸ್ತೃತಗೊಳಿಸಲು ಮತ್ತು ಸಮನ್ವಯಗೊಳಿಸಲು ನಿರ್ಣಯಿಸಿರುವ ಮೂಲಕ ರಿಸರ್ವ್ ಬ್ಯಾಂಕು ಸಾಮಾನ್ಯರಿಗೆ ವಿದೇಶಿ ವಿನಿಮಯವು ಸುಲಭವಾಗಿ ದೊರಕುವಂತಾಗಲು ಅವಕಾಶ ಕಲ್ಪಿಸಿದ್ದು, ಸ್ಪರ್ಧೆಯಿಂದಾಗಿ ಉತ್ತಮ ಸೇವೆ ಸಿಗಲು ಸಾಧ್ಯವಾಗುತ್ತದೆ ಎಂದು ನಿರೀಕ್ಷಿಸಿದೆ.

ಈಗ ಅಧಿಕೃತ ವ್ಯಕ್ತಿಗಳು ಕೈಗೊಂಡ ಚಟುವಟಿಕೆಗಳ ವ್ಯಾಪ್ತಿಯನ್ನು ಉದಾರೀಕರಿಸುವ, ಸಮನ್ವಯಗೊಳಿಸುವ ದೃಷ್ಟಿಯಿಂದ ಭಾರತೀಯ ರಿಸರ್ವ್ ಬ್ಯಾಂಕು ಸಂಬಂಧಪಟ್ಟ ವಿಷಯಗಳ ಅಧ್ಯಯನಕ್ಕಾಗಿ ಒಂದು ಆಂತರಿಕ ತಂಡವನ್ನು ರಚಿಸಿ ಅವಕಾಶವನ್ನು ವಿಸ್ತೃತಗೊಳಿಸುವುದರ ಅಗತ್ಯವನ್ನು ಗಮನದಲ್ಲಿರಿಸಿಕೊಂಡು ತತ್ಸಂಬಂಧದ ಸುರಕ್ಷತಾ ಕ್ರಮಗಳ ಸಹಿತವಾಗಿ ಶಿಫಾರಸುಗಳನ್ನು ಸಲ್ಲಿಸಬೇಕೆಂದು ತಿಳಿಸಿತ್ತು ಎಂಬುದನ್ನು ಇಲ್ಲಿ ಸ್ಮರಿಸಬಹುದಾಗಿದೆ. ಆಂತರಿಕ ತಂಡದ ವರದಿಯನ್ನು ಅಭಿಪ್ರಾಯಕ್ಕಾಗಿ ಆರ್‌ಬಿಐ ವೆಬ್‌ಸೈಟ್‌ಗೆ ಹಾಕಲಾಗಿದೆ. ಹೆಚ್ಚು ಹೆಚ್ಚು ಸಂಸ್ಥೆಗಳು ಚಾಲ್ತಿ ಖಾತೆ ವ್ಯವಹಾರಗಳಿಗೆ ವಿದೇಶಿ ವಿನಿಮಯವನ್ನು ಬಟವಾಡೆ ಮಾಡುವಂತಾಗಲು ಇಂದು ಹೊರಡಿಸಲಾದ ಸುತ್ತೋಲೆಯು ಆಂತರಿಕ ತಂಡದ ಶಿಫಾರಸುಗಳ ಸಂಬಂಧದಲ್ಲಿ ಬಂದ ಅಭಿಪ್ರಾಯಗಳನ್ನು ಪರಿಗಣನೆಗೆ ತೆಗೆದುಕೊಳ್ಳುತ್ತದೆ.

ಎ.ಪಿ (ಡಿಐಅರ್ ಸೀರಿಸ್) ಸುತ್ತೋಲೆ ಸಂಖ್ಯೆ 25 ದಿನಾಂಕ ಮಾರ್ಚ್6, 2006, ಆರ್‌ಬಿಐ ವೆಬ್‌ಸೈಟ್ (http:/www/rbi.org.in)ನಲ್ಲಿ ಲಭ್ಯವಿದೆ.

ಅಲ್ಪನಾ ಕಿಲ್ಲಾವಾಲಾ,
ಮುಖ್ಯ ಪ್ರಧಾನ ವ್ಯವಸ್ಥಾಪಕರು.

ಪತ್ರಿಕಾ ಪ್ರಕಟಣೆ ಸಂ.: 2005–2006/1124